# IN THE COURT OF THE ADDL. SENIOR CIVIL JUDGE & JMFC., GUBBI
# **OS – 116/2023**

Witness present and duly sworn on : 17.11.2025.

<u>Further cross Examination: by Counsel for Defendant No.2 to 6:</u>

OS NO.362/2014 ಡಿಕ್ರಿಯ ಆಧಾರದ ಮೇಲೆ 6 ನೇ ಪ್ರತಿವಾದಿ ಗಂಗಮ್ಮ ರವರ ಹೆಸರಿಗೆ ಪಹಣಿಯು MR No.H33/2018-19 ಆಧಾರದ ಮೇಲೆ ಬದಲಾವಣೆ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಗಂಗಮ್ಮ ರವರು ಎರಡು ಬಾರಿ ಮೂಡಲಗಿರಿಯಪ್ಪ ರವರ ಹೆಂಡತಿ ಎಂದು ಸಲ್ಲಿಸಿದ ದಾವೆ ವಜಾ ಆದ ನಂತರ ಮೋಸದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುತ್ತಾರೆ ಮತ್ತು ವಜಾ ಆಗಿರುವ ದಾವೆಯ ಮೇಲ್ಮನವಿಯು ಮಾನ್ಯ ಉಚ್ಚನ್ಯಾಯಾಲಯದಲ್ಲಿ ಚಾಲ್ತಿಯಲ್ಲಿ ಇರುತ್ತದೆ. ಗಂಗಮ್ಮ ರವರ ಹೆಸರಿಗೆ ಬದಲಾವಣೆ ಆಗಿರುವ ಖಾತೆ ಪಹಣಿಯನ್ನು ಪ್ರಶ್ನಿಸಿದ್ದಿರಾ ಎಂದರೆ ನನ್ನ ತಾಯಿ ನೋಡಿಕೊಳ್ಳುತ್ತಿದ್ದರು. 6 ನೇ ಪ್ರತಿವಾದಿ ಗಂಗಮ್ಮ ರವರಿಗೆ ಮಕ್ಕಳು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಅವರು ಅಡಿಕೆ ಸುಲಿಯುವ ಕೆಲಸ ಮಾಡುತ್ತಾರೆಂದರೆ ನನಗೆ ಗೊತ್ತಿಲ್ಲ. ನಾನು ದಾವೆಯಲ್ಲಿ ಅವರ ವಯಸ್ಸನ್ನು 63 ವರ್ಷ ಎಂದು ತೋರಿಸಿದ್ದು, ಅವರಿಗೆ ಈಗ ವಯಸ್ಸಾಗಿರುವ ಕಾರಣ ಕೆಲಸ ಮಾಡಲು ಆಗುತ್ತಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಅವರಿಗೆ ವಯಸ್ಸಾಗಿ ಕೆಲಸ ಮಾಡಲು ಆಗದೆ ಇದ್ದ ಕಾರಣ OS NO.362/2014 ರಲ್ಲಿ ಬಂದಂತಹ ಎರಡು ಆಸ್ತಿಗಳನ್ನು ಅವರು ದಿನಾಂಕಃ 11.09.2019 ರಂದು ಜಯಣ್ಣ ರವರಿಗೆ ಮಾರಾಟ ಮಾಡಿದ್ದಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಜಯಣ್ಣ 6 ನೇ ಪ್ರತಿವಾದಿ ಗಂಗಮ್ಮ ರವರ ಸ್ವಂತ ತಮ್ಮ ಮತ್ತು ಆಸ್ತಿಯು ನಮ್ಮ ಸ್ವಾಧೀನದಲ್ಲಿ ಇದೆ. ದಿನಾಂಕಃ 11.09.2019 ರಂದು ಮಾರಾಟದ ನಂತರ ಜಯಮ್ಮ ರವರು ಎರಡು ಜಮೀನುಗಳ ಸ್ವಾಧೀನವನ್ನು ಬಿಟ್ಟಿದ್ದಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಸ್ವಾಧೀನದಲ್ಲಿ ಇದ್ದೇವೆ. ನಾನು ಸದರಿ ಆಸ್ತಿಗಳ ಸ್ವಾಧೀನವನ್ನು ತೋರಿಸಲು ನ್ಯಾಯಾಲಯದಲ್ಲಿ ದಾಖಲೆಯನ್ನು ಹಾಜರುಪಡಿಸಿದ್ದೇನೆ. ನಾನು ಸ್ವಾಧೀನದಲ್ಲಿ ಇರುವುದಿಲ್ಲ

ಮತ್ತು ದಾಖಲೆಗಳನ್ನು ಹಾಜರುಪಡಿಸದೆ ಇದ್ದರು ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಸದರಿ ಜಮೀನಿನಲ್ಲಿ ರಾಗಿ, ಚೆಂಡು ಹೂ, ಸೇವಂತಿಗೆ ಹೂವನ್ನು ಹಾಕಿರುತ್ತೇವೆ. ಕ್ರಯಪತ್ರದ ಆಧಾರದ ಮೇಲೆ ಜಯಣ್ಣ ರವರ ಹೆಸರಿಗೆ RRT DISC CR No.9/2020-21 ರ ಆದೇಶದಂತೆ ಪಹಣಿ ಬದಲಾವಣೆ ಆಗಿದೆ ಎಂದರೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವಾಗ ಮೋಸದಿಂದ ಮಾಡಿಕೊಂಡಿರುತ್ತಾರೆ. ನಾನು ಸಲ್ಲಿಸಿರುವ ದಾಖಲೆಯಂತೆ ನಿಪಿ-8 ಮತ್ತು 9 ಪಹಣಿಗಳು ಇವತ್ತಿಗೂ ಸಹ ಜಯಣ್ಣ ರವರ ಹೆಸರಿನಲ್ಲಿ ಇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಕಂದಾಯ ಅಧಿಕಾರಿಗಳೊಂದಿಗೆ ಶಾಮಿಲಾಗಿ ಮೋಸದಿಂದ ಮಾಡಿಸಿಕೊಂಡಿರುತ್ತಾರೆ. ಜಯಣ್ಣ ರವರ ಖಾತೆಯನ್ನು ಪ್ರಶ್ನಿಸಿದ್ದಿರಾ ಎಂದರೆ ನನ್ನ ತಾಯಿ ಮಾಡಿರುತ್ತಾರೆ. ಅದರ ಪ್ರಕರಣದ ಸಂಖ್ಯೆ ನನಗೆ ಗೊತ್ತಿಲ್ಲ. ಉಪವಿಭಾಗಾಧಿಕಾರಿಯ ಮುಂದೆ ಇದ್ದ ಪ್ರಕರಣವು ಜಯಣ್ಣ ರವರ ಹೆಸರಿನಲ್ಲಿ ಖಾತೆ ಆಗಿರುವುದು ಸರಿ ಎಂದು ವಜಾ ಆಗಿದೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳ ಸಂಭಂದ ನನ್ನ ತಾಯಿಯು ದಾವೆಗಳನ್ನು ಸಲ್ಲಿಸಿ ಸದರಿ ದಾವೆಗಳಲ್ಲಿ ಸೋತಿರುವ ಕಾರಣ ಈ ದಾವೆಯನ್ನು ನನ್ನ ಮೂಲಕ ಹಾಕಿಸಿದ್ದಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ದಾವೆಗಳಲ್ಲಿ ನನ್ನ ತಾಯಿಯ ಪರವಾಗಿ ಆದೇಶ ಆಗಿದ್ದು ಈಗ ನನ್ನ ತಾಯಿಯಿಂದ ಆಸ್ತಿಪಡೆಯಲು ಈ ದಾವೆ ಸಲ್ಲಿಸಿರುತ್ತೇನೆ. ದಾವಾ ಆಸ್ತಿಗಳಲ್ಲಿ ಜಯಣ್ಣ ರವರ ಮರಣದ ನಂತರ ಅವರ ಹೆಂಡತಿ ಮತ್ತು ಮಕ್ಕಳು ಸ್ವಾಧೀನದಲ್ಲಿ ಇದ್ದಾರೆ ಮತ್ತು ನಾನು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನನಗೆ ಗಂಗಮ್ಮ ಮತ್ತು ಮೂಡಲಗಿರಿಯಯ್ಯರವನವರೊಂದಿಗೆ ಯಾವುದೇ ಸಂಭಂದ ಇಲ್ಲದೆ ಇದ್ದರು ಸಹ ಅವರ ಆಸ್ತಿಯನ್ನು ಕಬಳಿಸಲು ಸುಳ್ಳು ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮೂಡಲಗಿರಿಯಪ್ಪ ನನ್ನ ತಂದೆ ಹಾಗೂ ಗಂಗಮ್ಮ ರವರಿಗೆ ಮೂಡಲಗಿರಿಯಪ್ಪನವರೊಂದಿಗೆ ಯಾವುದೇ ಸಂಭಂದ ಇರುವುದಿಲ್ಲ.

ನಾನು ಹಾಜರುಪಡಿಸಿರುವ ನಿಪಿ-1 ವಂಶವೃಕ್ಷ ದಾಖಲೆಯನ್ನು OS No.362/2014 ಡಿಕ್ರಿಯ ನಂತರ ಸೃಷ್ಟಿಸಿರುವ ದಾಖಲೆ ಎಂದರೆ ಸರಿಯಲ್ಲ. ನಿಪಿ-11 ರಿಂದ 15 ದಾಖಲೆಗಳನ್ನು ಈ ದಾವೆಯ ಸಲುವಾಗಿ ಸೃಷ್ಟಿಸಿ ಹಾಜರುಪಡಿಸಿರುವ ದಾಖಲೆಗಳು ಎಂದರೆ ಸರಿಯಲ್ಲ. ನಾನು ಮೂಡಲಗಿರಿಯಪ್ಪನವರ ಕುಟುಂಬಕ್ಕೆ ಸಂಭಂದ ಪಡದೆ ಇರುವ ಕಾರಣ ಆಸ್ತಿಗಳು

ಮೂಡಲಗಿರಿಯಪ್ಪನವರಿಗೆ ಹೇಗೆ ಬಂದವು ಎಂಬ ಮಾಹಿತಿ ನನಗೆ ಇಲ್ಲ  ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು  ಆಸ್ತಿಗಳು  ನನ್ನ ತಂದೆ ಮತ್ತು ತಾತ ತಿಮ್ಮಯ್ಯ ರವರು  ಖರೀದಿ ಮಾಡಿರುತ್ತಾರೆ ಮತ್ತು ಗಂಗಮ್ಮ ನವರು ನಮ್ಮ ಕುಟುಂಬಕ್ಕೆ ಸಂಭಂದಪಡುವುದಿಲ್ಲ.  ನನಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲದೆ ಇದ್ದರು ಸಹ  ಅವುಗಳನ್ನು ಕಬಳಿಸಲು  ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>Re examination - Nil</u>**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi